ದಕ್ಷಿಣ ಕನ್ನಡ ಜಿಲ್ಲೆಯ ಕೆ.ಎಂ.ಎಫ್.

ಶ್ರೀ ಕೆ. ಪ್ರತಾಪ್‌ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟ (ಕೆಎಂಎಫ್) ಆಶ್ರಯದಲ್ಲಿ ಎಷ್ಟು ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯಪ್ರವೃತ್ತವಾಗಿವೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ಪಾದನೆಗೊಂಡ ಹಾಲಿನ ಪ್ರಮಾಣವೆಷ್ಟು,

ಇ) ಜಿಲ್ಲೆಯ ಗ್ರಾಹಕರಿಗೆ ಪೂರೈಸಲು ಕೆ.ಎಂ.ಎಫ್.ಗೆ ಬೇಕಾದ ಹಾಲಿನ ಪ್ರಮಾಣವೆಷ್ಟು ?

ಈ) ಹಾಲು ಉತ್ಪಾದನೆಯನ್ನು ಹೆಚ್ಚಿಸಲು ಕೆ.ಎಂ.ಎಫ್. ಕೈಗೊಂಡ ಕ್ರಮಗಳೇನು.

ಶ್ರೀ ಕೃಷ್ಣ (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಅ) ಫೆಬ್ರವರಿ ೧೯೮೯ರ ಅಂತ್ಯದಲ್ಲಿ ೧೮೮ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯಾಚರಣೆಯಲ್ಲಿರುತ್ತವೆ.

ಆ) ಉತ್ಪಾದನೆಗೊಳ್ಳುತ್ತಿರುವ ಹಾಲಿನ ಪ್ರಮಾಣ ದಿನಂಪ್ರತಿ ಸುಮಾರು ೩.೫೩ ಲಕ್ಷ ಲೀಟರ್.

ಇ) ಸದ್ಯಕ್ಕೆ ದಿನಂಪ್ರತಿ ಸುಮಾರು ೫೦,೦೦೦ ಲೀಟರ್.

ಈ) ೧. ವಿಂಶ್ರತಳಿ ರಾಸುಗಳನ್ನು ಖರೀದಿಸುವುದು.

೨. ಕೃತಕ ಗರ್ಭಧಾರಣೆಯ ಮೂಲಕ ತಳಿಯ ಅಭಿವೃದ್ಧಿಪಡಿಸುವುದು.

೩. ಅಧಿಕ ಹಾಲು ಉತ್ಪಾದನೆಗಾಗಿ ಸಮತೋಲನ ಪಶು ಆಹಾರ ಪೂರಾಟ.

೪. ಹಸಿರು ಮೇವು ಅಭಿವೃದ್ಧಿ ಕಾರ್ಯಕ್ರಮ.

ಕೆ.ಡಿ.ಡಿ.ಪಿ.ನಿ. ಕೆ.ಎಂ.ಎಫ್. ಹಾಲಿನ ದರದ ಬಗ್ಗೆ

ಶ್ರೀ ಕೆ. ಪ್ರತಾಪ್‌ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ರೇಷ್ಮೆ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ೧-೪-೧೯೮೬ ರಿಂದ ೩೧-೩-೧೯೮೯ರವರೆಗೆ ರಾಜ್ಯ ಸರ್ಕಾರದ ಆಶ್ರಯದಲ್ಲಿದ್ದ ಹಿಂದಿನ ಕೆ.ಡಿ.ಡಿ.ಪಿ. ಈಗಿನ ಕೆ.ಎಂ.ಎಫ್. ಆಶ್ರಯದಲ್ಲಿ ಹಾಲಿನ ಸಂಗ್ರಹಣಾ ಹಾಗೂ ಮಾರುಕಟ್ಟೆ ಬೆಲೆಯನ್ನು ಎಷ್ಟು ಬಾರಿ ಏರಿಸಲಾಗಿದೆ. ಪ್ರತಿ ಏರಿಕೆ ಸಂದರ್ಭದ ದರದ ವಿವರಗಳನ್ನೊದಗಿಸುವುದು.

ಆ. ದರ ಏರಿಕೆಯಿಂದ ಉತ್ಪಾದಕರಿಗಾದ ಲಾಭಗಳು ಹಾಗೂ ಗ್ರಾಹಕರಿಗಾದ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ.

ಶ್ರೀ ಕೃಷ್ಣ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಅ. ಸಾಮಾನ್ಯವಾಗಿ ಶೇಖರಣೆ ಬೆಲೆಯನ್ನು ಮೂರು ಬಾರಿ ಹಾಗೂ ಮಾರಾಟದ ಬೆಲೆಯನ್ನು ಎರಡು ಬಾರಿ ಏರಿಸಲಾಗಿದೆ. ವಿವರ ಅನುಬಂಧ-೧ರಲ್ಲಿ, ಲಗತ್ತಿಸಲಾಗಿದೆ.

ಆ. ಹೌದು.

ತಾಳಿಭಾಗ್ಯ ಯೋಜನೆ ಬದಲು ಬೇರೆ ಯೋಜನೆ ರೂಪಿಸುವ ಬಗ್ಗೆ

೮೬೦. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಸರ್ಕಾರದ ತಾಳಿಭಾಗ್ಯ ಯೋಜನೆ ಬದಲು ಬೇರೆ ಕಾರ್ಯಕ್ರಮ ರೂಪಿಸುವುದಾಗಿ ಆಶ್ವಾಸನೆ ಕೊಟ್ಟಿದ್ದು ನಿಜವೆ.

ಆ. ಹಾಗಿದ್ದಲ್ಲಿ, ಆ ಕಾರ್ಯಕ್ರಮ ರೂಪಿಸಿ ಜಾರಿಗೆ ತೊಡಲಾಗಿದೆಯೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ ಮಂತ್ರಿಗಳು).—

ಅ. ಹೌದು.

ಆ. ಇಲ್ಲ.

ಹರಿಜನರ ಏಳಿಗೆಗಾಗಿ ಏಪ್ರಿಲ್ ೮೮ ರಿಂದ ಡಿಸೆಂಬರ್ ೮೮ರವರೆಗೆ ಖರ್ಚು ಮಾಡಿರುವ ಹಣದ ವಿವರ

೮೫೯. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಮಾಜ ಕಲ್ಯಾಣ ಯುವ ಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸ್ಪೆಷಲ್ ಕಾಂಪೋನೆಂಟ್ ಕಾರ್ಯಕ್ರಮದ ಅನ್ವಯ ರಾಜ್ಯದಲ್ಲಿರುವ ಪರಿಶಿಷ್ಟ ಜನಾಂಗದವರಿಗೆ ಏಪ್ರಿಲ್ ೧೯೮೮ ರಿಂದ ಡಿಸೆಂಬರ್ ೧೯೮೮ ರವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯ(ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು).—

ಅ) ವಿಶೇಷ ಘಟಕ ಯೋಜನೆಯಲ್ಲಿ ಏಪ್ರಿಲ್ ನಿಂದ ಡಿಸೆಂಬರ್, ೧೯೮೮ರವರೆಗೆ ೩೪೯೭.೮೭ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಪಶುವೈದ್ಯ ಶಾಲೆಗಳ ಬಗ್ಗೆ

೮೬೬. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ರೇಷ್ಮೆ ಮತ್ತು ಪಶು ಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ, ?

ಅ) ಗ್ರಾಮೀಣ ಪ್ರದೇಶಗಳಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯುವಾಗ ಸರ್ಕಾರದವರು ಅನುಸರಿಸುವ ನೀತಿ ನಿಯಮಗಳೇನು,

ಆ) ರಾಜ್ಯದಲ್ಲಿ ಇಲ್ಲಿಯವರೆಗೆ ಸ್ಥಾಪಿಸಲ್ಪಟ್ಟಿರುವ ಪಶುವೈದ್ಯ ಶಾಲೆಗಳೆಷ್ಟು ಇನ್ನು ಸ್ಥಾಪಿಸ ಬೇಕಾದುದೆಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ಸಂಡೂರು ತಾಲ್ಲೂಕಿನಲ್ಲಿರುವ ಪಶುವೈದ್ಯ ಶಾಲೆಗಳ ಸ್ಥಿತಿಗತಿ ಸುಧಾರಿಸಲು ಸರ್ಕಾರ ಯೋಚಿಸಿದೆಯೇ? (ಕಟ್ಟಡ ಹಾಗೂ ಇತರೆ ಸೌಲಭ್ಯಗಳ ಬಗ್ಗೆ)

ಶ್ರೀ ಕೃಷ್ಣ, (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಅ) ರಾಜ್ಯದಲ್ಲಿ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವಾಗ ಕೆಳಕಂಡ ಅಂಶಗಳನ್ನು ಗಮನಿಸಲು ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಸೂಚನೆ ನೀಡಲಾಗಿದೆ.

೧. ರಾಷ್ಟ್ರೀಯ ಕೃಷಿ ಆಯೋಗದ ಇತ್ತೀಚಿನ ಶಿಫಾರ್ಸಿನಂತೆ ೫೫೦೦ ದನಗಳ ಘಟಕಗಳಿಗೆ ಅಥವಾ ೧೫ ಗ್ರಾಮಗಳಿಗೆ ಒಂದು ಪಶುವೈದ್ಯ ಶಾಲೆ ಇರಬೇಕು.

೨. ಪಶುವೈದ್ಯಶಾಲೆಯನ್ನು ತೆರೆಯಲು ಆರಿಸಿದ ಸ್ಥಳದಿಂದ ೫–೧೦ ಕಿ.ಮೀ. ಸುತ್ತಳತೆಯಲ್ಲಿ ಯಾವ ಪಶುವೈದ್ಯ ಶಾಲೆಯೂ ಸಹ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಳ್ಳ ಬೇಕು.

೩. ಪಶುವೈದ್ಯ ಶಾಲೆಯನ್ನು ನಡೆಸಲು ಅವಶ್ಯಕ ಸೂಕ್ತ ಖಾಯಂ ಮಾದರಿ ಕಟ್ಟಡವನ್ನು ಸಂಬಂಧಪಟ್ಟ ಗ್ರಾಮದ ಮಂಡಳ ಪಂಚಾಯ್ತಿಯವರು ಅಥವಾ ಸಾರ್ವಜನಿಕರು ಅಥವಾ ದಾನಿಗಳು ಅಥವಾ ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನವರು ಉಚಿತವಾಗಿ ಕಟ್ಟಿಸಿಕೊಡಬೇಕು.

೪. ಪಶುವೈದ್ಯ ಶಾಲೆಯು ಸ್ಥಾಪಿತವಾಗಬೇಕಾದ ಗ್ರಾಮದಲ್ಲಿ ಸಾರ್ವಜನಿಕ ಆಸ್ಪತ್ರೆ, ಸಾರಿಗೆ ಸಂಪರ್ಕ, ಅಂಚೆ ಕಚೇರಿ, ಶಾಲೆ ಮತ್ತು ಕಾಲೇಜು ಮುಂತಾದ ನಾಗರಿಕ ಸೌಲಭ್ಯಗಳು ಇವೆಯೇ ಎಂಬುದನ್ನು ಗಮನಿಸಬೇಕು.